## ಪಿಯು ಸಾಧಕರು

### ಕೆ.ಆರ್.ಪುರದ ಶ್ರೀ ವೆಂಕಟೇಶ್ವರ ಪಿಯು ಕಾಲೇಜು– ವಾಣಿಜ್ಯ ವಿಭಾಗ



ಜಿ. ಚೈತನ್ಯ ಶೇ 96.50 | ಬಿ.ಎಸ್. ಬಿಂದು ಶೇ 94.33 | ಎಸ್. ವಿನಿಲ ಶೇ 93.83 | ಎಸ್. ವಂದನಾ ಶೇ 93.33

## ಬಡ ವಿದ್ಯಾರ್ಥಿನಿಗೆ ಶೇ 97 ಅಂಕ

ಕೆ.ಆರ್.ಪುರ: ಕೆ.ಆರ್.ಪುರದ ಶ್ರೀ ವೆಂಕಟೇಶ್ವರ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಸಿಂಧು ಎಂ. ದ್ವಿತೀಯ ಪಿಯುಸಿಯಲ್ಲಿ ಶೇ 97.83 ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

‘ಟಿವಿ, ಮೊಬೈಲ್‌ನಿಂದ ದೂರವಿದ್ದು, ಓದಿನಲ್ಲಿ ತೊಡಗಿಸಿಕೊಂಡಿದ್ದೇ ಈ ಸಾಧನೆಗೆ ಕಾರಣ’ ಎನ್ನುತ್ತಾರೆ ಅವರು.

ಕೀರ್ತಿ ಅವರ ತಂದೆ ನಿಧನರಾಗಿದ್ದು, ತಾಯಿ ಮತ್ತು ಅಣ್ಣ ಬೇಬಿ ಕೇರ್ ಸೆಂಟರ್ ನಡೆಸುವ ಮೂಲಕ ಸಿಂಧು ಓದಿಗೆ ಒತ್ತಾಸೆಯಾಗಿದ್ದಾರೆ.

‘ಪ್ರತಿದಿನ ನಾಲ್ಕರಿಂದ ಐದು ಗಂಟೆಗಳ ಕಾಲ ಅಭ್ಯಾಸ ಮಾಡುತ್ತಿದ್ದೆ.



ಸಿಂಧು ಎಂ

ಸಿಎ ಮಾಡಬೇಕೆಂಬ ಆಸೆ ಇದೆ’ ಎನ್ನುತ್ತಾರೆ ಸಿಂಧು.

‘ಪ್ರತಿಭಾನ್ವಿತ ವಿದ್ಯಾರ್ಥಿ ಸಿಂಧು ಅವರು ಪದವಿ ಪಡೆಯಲು ನಮ್ಮ ಶಿಕ್ಷಣ ಸಂಸ್ಥೆಯಿಂದ ಸಹಕಾರ ನೀಡುತ್ತೇವೆ. ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ನಿರಂತರವಾಗಿ ಮಾಡುತ್ತಾ ಬರುತ್ತಿದ್ದೇವೆ’ ಎಂದು ಶ್ರೀ-ವೆಂಕಟೇಶ್ವರ ಶಿಕ್ಷಣ ಸಮೂಹ ಸಂಸ್ಥೆಗಳ ಸಂಸ್ಥಾಪಕ ಡಾ.ಕೆ.ವಿ.ಮುನಿಸ್ವಾಮಿ ಮತ್ತು ಸಂಸ್ಥೆ ನಿರ್ದೇಶಕ ವಿ.ಎಂ.ರವಿ ಅವರು ತಿಳಿಸಿದರು.

## ಕೃಷಿ: ಮುಕ್ತ ವ್ಯಾಪಾರಕ್ಕೆ ಅಧಿಸೂಚನೆ

ನವದೆಹಲಿ (ಪಿಟಿಐ): ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಮುಕ್ತವಾಗಿ ಮಾರಾಟ ಮಾಡಲು ಅನುವು ಮಾಡಿಕೊಡುವ ಎರಡು ಸುಗ್ರೀವಾಜ್ಞೆಗಳ ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಹೊರಡಿಸಿದೆ. ರೈತರು ಮಂಡಿಯಿಂದ ಆಚೆಗೆ ಉತ್ಪನ್ನವನ್ನು ಮಾರಲು ಮತ್ತು ಬೆಳೆ ಬೆಳೆಯುವುದಕ್ಕೂ ಮುನ್ನ ಖಾಸಗಿಯವರ ಜೊತೆ ಕೃಷಿ ಉತ್ಪನ್ನ ಮಾರಾಟ–ಖರೀದಿ ಒಡಂಬಡಿಕೆ ಮಾಡಿಕೊಳ್ಳಲು ಈ ಸುಗ್ರೀವಾಜ್ಞೆಗಳು ನೆರವಾಗುತ್ತವೆ.

ರೈತ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ನೆರವು), ಹಾಗೂ ಬೆಲೆ ಖಾತರಿ ಮತ್ತು ಬೇಸಾಯ ಸೇವೆಗಳ ಒಪ್ಪಂದ (ಸಬಲೀಕರಣ ಮತ್ತು ಸಂರಕ್ಷಣೆ) ಸುಗ್ರೀವಾಜ್ಞೆಗಳನ್ನು 2020ರ ಜೂನ್ 5ರಂದು ಹೊರಡಿಸಲಾಗಿತ್ತು. ಜುಲೈ 20ರಂದು ಈ ಬಗೆಗಿನ ಅಧಿಸೂಚನೆ ಪ್ರಕಟವಾಗಿದೆ.

ಸರ್ಕಾರದ ಅನುಸೂಚಿಯಲ್ಲಿರುವ ಕೃಷಿ ಮಂಡಿಗಳಷ್ಟೇ ಅಲ್ಲದೆ, ರಾಜ್ಯದೊಳಗೆ ಹಾಗೂ ಹೊರಗೆ ರೈತರು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಈ ಸುಗ್ರೀವಾಜ್ಞೆ ಅವಕಾಶ ನೀಡುತ್ತದೆ.

### ಅವಾಂತರ ಸೃಷ್ಟಿಸಿದ ಮಳೆ – ತೆರವಾಗದ ರಾಜಕಾಲುವೆ ಒತ್ತುವರಿ; ನಿರ್ಮಾಣವಾಗದ ತಡೆಗೋಡೆ

# ಮುಳುಗಿದ ರುಕ್ಮಿಣಿ ನಗರದ ಮನೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರ ರಾತ್ರಿ ಸುರಿದ ಮಳೆಗೆ ನಗರದ ವಿವಿಧೆಡೆ ಮನೆಗಳಿಗೆ ನೀರು ನುಗ್ಗಿದ್ದು, ಚೊಕ್ಕಸಂದ್ರ ವಾರ್ಡ್‌ನ ರುಕ್ಮಿಣಿನಗರದಲ್ಲಿ ರಾಜಕಾಲುವೆ ನೀರು ಉಕ್ಕಿ ಹರಿದು ಅಪಾರ ಹಾನಿ ಉಂಟುಮಾಡಿದೆ.

ಚೊಕ್ಕಸಂದ್ರ ಕೆರೆ ಒಡೆದು ಕಳೆದ ವರ್ಷ ರುಕ್ಮಿಣಿನಗರ ಮತ್ತು ಬೆಲ್ಮಾರ್ ಲೇಔಟ್‌ನಲ್ಲಿ ರಾತ್ರೋರಾತ್ರಿ ಮನೆಗಳಿಗೆ ನೀರು ನುಗ್ಗಿ ಭಾರಿ ಅವಾಂತರ ಸೃಷ್ಟಿಸಿತ್ತು. ಸೋಮವಾರ ರಾತ್ರಿ ಭಾರಿ ಮಳೆ ಸುರಿದಿದ್ದರಿಂದ ರಾಜಕಾಲುವೆ ನೀರು ನುಗ್ಗಿ ನಿವಾಸಿಗಳಲ್ಲಿ ಆತಂಕ ಸೃಷ್ಟಿಸಿತು.

ರಾತ್ರಿ 8ರಿಂದ 10 ಗಂಟೆ ತನಕ ಸತತವಾಗಿ ಸುರಿದ ಮಳೆಯಿಂದ ರಾಜಕಾಲುವೆಗಳಲ್ಲಿ ನೀರಿನ ಹರಿವು ಜಾಸ್ತಿ ಆಯಿತು. ಸರಾಗವಾಗಿ ಹರಿದು ಹೋಗಲು ಸಾಧ್ಯವಾಗದೆ ಅಕ್ಕಪಕ್ಕದ ಬಡಾವಣೆಗಳಿಗೆ ನುಗ್ಗಿತು. ನೆಲಗದರನಹಳ್ಳಿ ಕಡೆಯಿಂದ ಬರುವ ಕಾಲುವೆಯ ನೀರು ಕೂಡ ಉಕ್ಕಿ ಹರಿದು ಮನೆಗಳನ್ನು ಸೇರಿತು. ಹಲವು ಮನೆಗಳ ಕಾಂಪೌಂಡ್‌ಗಳು ಕುಸಿದು ಬಿದ್ದಿವೆ. ನೆಲ ಮಾಳಿಗೆಯಲ್ಲಿರುವ ಅಂಗಡಿಗಳು, ಸಿದ್ಧ ಉಡುಪು ತಯಾರಿಕಾ ಘಟಕಗಳಲ್ಲಿನ ವಸ್ತುಗಳು, ಹೊಲಿಗೆ ಯಂತ್ರಗಳು ನೀರಿನಲ್ಲಿ ಮುಳುಗಿ ಹಾಳಾಗಿವೆ.

‘ಮಳೆ ನಿಂತರೂ ಕಾಲುವೆಯ ನೀರಿನ ಹರಿವು ಜಾಸ್ತಿ ಇದ್ದ ಕಾರಣ ಮನೆಗಳಿಗೆ ನೀರು ಬರುತ್ತಲೇ ಇತ್ತು. ಇಡೀ ರಾತ್ರಿ ಮನೆಯಲ್ಲಿನ ನೀರು ಹೊರ ಹಾಕುವುದೇ ಕೆಲಸವಾಯಿತು. ಸಂಪುಗಳು ಕೊಳಚೆ ನೀರಿನಿಂದ ತುಂಬಿ ಹೋಗಿವೆ. ಮನೆಯಲ್ಲಿ ಟಿ.ವಿ, ಬಟ್ಟೆಗಳು, ಕಂಪ್ಯೂಟರ್‌ಗಳು ಹಾಳಾಗಿವೆ’ ಎಂದು ನಿವಾಸಿಗಳು ಹೇಳಿದರು.

ಚೊಕ್ಕಸಂದ್ರ ಕೆರೆ ಕೋಡಿ ಬಿದ್ದರೆ ಆ ನೀರು ದೊಡ್ಡಬಿದರಕಲ್ಲು ಕೆರೆ ಸೇರುತ್ತದೆ. ಈ ನೀರು ಹರಿದು ಹೋಗಲು ಇರುವ ರಾಜಕಾಲುವೆ ಬಡಾವಣೆಗಳಲ್ಲಿ ಹಾದು ಹೋಗಿದೆ. ಅದು ಒತ್ತುವರಿಯಾಗಿರುವ ಕಾರಣ ಸಮಸ್ಯೆ ಉಲ್ಬಣಿಸಿದೆ.

‘ಎಂಟನೇ ಮೈಲಿಯಿಂದ ನೆಲಗದರನಹಳ್ಳಿ ರಸ್ತೆಯಲ್ಲಿ ಸಾಗಿದರೆ 500 ಮೀಟರ್ ದೂರದಲ್ಲಿ ರಾಜಕಾಲುವೆಯ ಸೇತುವೆಯೊಂದು ಎದುರಾಗುತ್ತದೆ. ಆ ಸೇತುವೆ ಆಗಲೋ ಈಗಲೂ ಬೀಳುವ ಸ್ಥಿತಿಯಲ್ಲಿದೆ. ಅಲ್ಲಿ ನಿಂತು ನೋಡಿದರೆ ರಾಜಕಾಲುವೆಯ ಅಗಲ ನಾಲ್ಕೈದು ಅಡಿ ಮಾತ್ರ ಇದೆ. ಇಷ್ಟು ಕಿರಿದಾದ ರಾಜಕಾಲುವೆಯಲ್ಲಿ ನೀರು ರಭಸವಾಗಿ ನುಗ್ಗಿದರೆ ಅಕ್ಕ-ಪಕ್ಕದ ಬಡಾವಣೆಗಳಿಗೆ ವ್ಯಾಪಿಸಿಕೊಳ್ಳುತ್ತದೆ’ ಎಂದು ನಿವಾಸಿಗಳು ಆರೋಪಿಸುತ್ತಾರೆ.

ರಾಜಕಾಲುವೆ ಒತ್ತುವರಿ ಮಾಡಿ ನಿರ್ಮಾಣಗೊಂಡಿರುವ ಮನೆಗಳನ್ನು ಬಿಬಿಎಂಪಿ ಅಧಿಕಾರಿಗಳು ಗುರುತು ಮಾಡಿದ್ದಾರೆ. ಆದರೆ, ತೆರವುಗೊಳಿಸದ ಕಾರಣ ಇಡೀ ಬಡಾವಣೆ ಜನರು ತೊಂದರೆ ಅನುಭವಿಸಬೇಕಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

‘ಕ್ಷೇತ್ರದ ಬಗ್ಗೆ ಸರ್ಕಾರ ಹಾಗೂ ಬಿಬಿಎಂಪಿ ದಿವ್ಯ ನಿರ್ಲಕ್ಷ್ಯ ತಾಳಿವೆ. ಚುನಾವಣೆ ಬಂದಾಗ ನಮ್ಮ ನೆನಪಾಗುತ್ತದೆ’ ಎಂದು ದೂರಿದರು.

**2 ಸಾವಿರ ಮನೆಗಳಿಗೆ ನೀರು:** ಹಾನಿಗೀಡಾದ ಪ್ರದೇಶಗಳಿಗೆ ಶಾಸಕ ಆರ್.ಮಂಜುನಾಥ್ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು.

‘ಗುಂಡಪ್ಪ ಬಡಾವಣೆ, ರಾಜಗೋಪಾಲನಗರ, ಬಸಪ್ಪನಕಟ್ಟೆ, ಪೀಣ್ಯ ಕೈಗಾರಿಕಾ ಪ್ರದೇಶ, ಪ್ರೀತಿನಗರ, ಪಾರ್ವತಿನಗರ, ಬಾಗಲಗುಂಟೆ ವಾರ್ಡ್, ಬೈರವೇಶ್ವರ ನಗರದ ಸುಮಾರು ಎರಡು ಸಾವಿರ ಮನೆಗಳಿಗೆ ಮಳೆಯಿಂದ ಹಾನಿಯಾಗಿದೆ’ ಎಂದು ಅವರು ಹೇಳಿದರು.

‘ಕ್ಷೇತ್ರದ ರಾಜಕಾಲುವೆಗಳ ಅಭಿವೃದ್ಧಿಗೆ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ₹130 ಕೋಟಿ ಅನುದಾನ ನೀಡಿತ್ತು. ಬಿಜೆಪಿ ಸರ್ಕಾರ ಬಂದ ಬಳಿಕ ಇದನ್ನು ಕಿತ್ತುಕೊಳ್ಳಲಾಯಿತು. ಕೋವಿಡ್ ಸಂಬಂಧ ಚರ್ಚಿಸಲು ಮುಖ್ಯಮಂತ್ರಿ ಅವರು ಬುಧವಾರ ಸಭೆ ಕರೆದಿದ್ದಾರೆ. ಮಳೆಯಿಂದ ಆಗಿರುವ ಅನಾಹುತದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸುತ್ತೇನೆ’ ಎಂದರು.





ಬೆಲ್ಮಾರ್ ಲೇಔಟ್‌ನಲ್ಲಿ ಮನೆಗೆ ನುಗ್ಗಿರುವ ನೀರು ಹೊರ ಹಾಕುತ್ತಿರುವುದು (ಎಡಚಿತ್ರ) ನಾಗಸಂದ್ರದ ಜೋಡಿಭಾವಿ ರಸ್ತೆಯಲ್ಲಿ ಬೈಕ್‌ಗಳ ಮೇಲೆ ಕಾಂಪೌಂಡ್ ಕುಸಿದಿರುವುದು – ಪ್ರಜಾವಾಣಿ ಚಿತ್ರಗಳು

### ನಗರದಲ್ಲಿ ಎರಡು ದಿನ ಮಳೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಇನ್ನೂ ಎರಡು ದಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಜುಲೈ 23ರ ರಾತ್ರಿ ತನಕ ಮಳೆಯಾಗುವ ಮುನ್ಸೂಚನೆ ಇದೆ’ ಎಂದು ಹೇಳಿದೆ.

### ಯಂತ್ರೋಪಕರಣ ನೀರು ಪಾಲು

ರಾಜರಾಜೇಶ್ವರಿನಗರ: ಸೋಮವಾರ ರಾತ್ರಿ ಸುರಿದ ಭಾರೀ ಮಳೆಗೆ ಹಲವು ಗಾರ್ಮೆಂಟ್ ಕಾರ್ಖಾನೆಗಳಿಗೆ ಒಳಚರಂಡಿ ನೀರು ನುಗ್ಗಿದ ಪರಿಣಾಮ ಪೀಣ್ಯದಲ್ಲಿ ಕೋಟ್ಯಂತರ ರೂಪಾಯಿ ವೆಚ್ಚದ ಎಲೆಕ್ಟ್ರಿಕ್ ಯಂತ್ರಗಳು ಹಾಳಾಗಿವೆ.

ಲಕ್ಷ್ಮಿದೇವಿನಗರ ಸಮೀಪದ ಮುನೇಶ್ವರನಗರ ಬಳಿಯ ಬೃಹತ್ ರಾಜಕಾಲುವೆಯ ಸೇತುವೆ ಸಮೀಪದ ರಸ್ತೆ ಕುಸಿದು, ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾಯಿತು. ಸೇತುವೆ ಸಮೀಪದ ವೆಂಕಟೇಶ್, ಸಂತೋಷ್, ಅರವಿಂದ ಅವರ ಮನೆಗೆ ನೀರು ನುಗ್ಗಿದ್ದರಿಂದ ಇಡೀ ರಾತ್ರಿ ಜಾಗರಣೆ ಮಾಡಬೇಕಾಯಿತು.

‘ರಾತ್ರಿ ಅಗ್ನಿ ಶಾಮಕದಳದ ಸಿಬ್ಬಂದಿ, ಬೆಸ್ಕಾಂ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದರೂ, ಯಾರೂ ಇತ್ತ ಕಡೆಬರಲಿಲ್ಲ. ನಮಗೆ ಕೋಟ್ಯಂತರ ರೂಪಾಯಿ ನಷ್ಟ ಉಂಟಾಗಿದೆ’ ಎಂದು ಗಾರ್ಮೆಂಟ್ಸ್‌ನ ಮಾಲೀಕರು ಹೇಳಿದರು.

ಮುನೇಶ್ವರ ನಗರಕ್ಕೆ ಭೇಟಿ ನೀಡಿದ ಪಾಲಿಕೆ ಸದಸ್ಯ ವೇಲು ನಾಯ್ಕರ್, ಸಂತ್ರಸ್ತರಿಗೆ ಪರಿಹಾರ ಕೊಡಿಸುವ ಭರವಸೆ ನೀಡಿದರು.

### ಬಾಲಕಿ ದುರ್ಮರಣ

ಬೆಂಗಳೂರು: ನಗರದಲ್ಲಿ ಸೋಮವಾರ ರಾತ್ರಿ ಮಳೆ ಸುರಿಯುತ್ತಿದ್ದ ವೇಳೆಯಲ್ಲಿ ಕಾವಲ್ ಬೈರಸಂದ್ರ ಬಳಿಯ ಕಾವೇರಿನಗರದಲ್ಲಿ ವಿದ್ಯುತ್ ತಗುಲಿ ಫಾತಿಮಾ ಎಂಬ 8 ವರ್ಷದ ಬಾಲಕಿ ದುರ್ಮರಣಕ್ಕೀಡಾಗಿದ್ದಾಳೆ.

‘ತಾಯಿ ಜೊತೆಯಲ್ಲಿ ಹೊರಟಿದ್ದ ಫಾತಿಮಾ, ರಸ್ತೆ ಬದಿಯ ವಿದ್ಯುತ್ ಕಂಬ ಮುಟ್ಟಿದ್ದರಿಂದ ಈ ಅವಘಡ ಸಂಭವಿಸಿದೆ’ ಎಂದು ಡಿ.ಜೆ.ಹಳ್ಳಿ ಪೊಲೀಸರು ಹೇಳಿದರು.

‘ವಿದ್ಯುತ್ ಕಂಬ ಹಳೆಯದ್ದಾಗಿತ್ತು. ಅದರ ಕಬ್ಬಿಣದ ಕಂಬಿಗಳು ಹೊರಗೆ ಬಂದಿದ್ದವು. ಜೋರು ಮಳೆ ಬಂದ ಸಂದರ್ಭದಲ್ಲಿ ಕಂಬಿಗಳಲ್ಲೇ ವಿದ್ಯುತ್ ಹರಿದಿರುವ ಮಾಹಿತಿ ಇದೆ. ಬಾಲಕಿ ಸಾವಿನ ಬಗ್ಗೆ ಪೋಷಕರು ದೂರು ನೀಡಿದ್ದಾರೆ’ ಎಂದೂ ಪೊಲೀಸರು ಮಾಹಿತಿ ನೀಡಿದರು.

# ದಿನಕ್ಕೆ 192 ಶವ ಸಂಸ್ಕಾರ ಸಾಮರ್ಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ನಿಂದ ಮೃತಪಡುವವರು ಹಾಗೂ ಸ್ವಾಭಾವಿಕವಾಗಿ ಸಾಯುತ್ತಿರುವವರ ಅಂತ್ಯಕ್ರಿಯೆ ನಡೆಸುವುದಕ್ಕೆ ಸೌಲಭ್ಯದ ಕೊರತೆ ಇಲ್ಲ. ಬಿಬಿಎಂಪಿ ವ್ಯಾಪ್ತಿಯ 11 ಚಿತಾಗಾರಗಳಲ್ಲಿ ದಿನಕ್ಕೆ 192 ಮೃತದೇಹಗಳ ಅಂತ್ಯಕ್ರಿಯೆ ನಡೆಸುವಷ್ಟು ಸಾಮರ್ಥ ಇದೆ’ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

ನಗರದಲ್ಲಿ ಅಂತ್ಯಕ್ರಿಯೆ ನಡೆಸುವುದಕ್ಕೆ ಚಿತಾಗಾರಗಳ ಬಳಿ ಜನ ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ಇದೆ ಎಂಬ ದೂರುಗಳು ಬಂದ ಹಿನ್ನೆಲೆಯಲ್ಲಿ ಅವರು ಮಂಗಳವಾರ ವಿಶೇಷ ಸಭೆ ನಡೆಸಿದರು.

‘ನಗರದಲ್ಲಿ 12 ವಿದ್ಯುತ್ ಚಿತಾಗಾರಗಳಿದ್ದು, ಇವುಗಳಲ್ಲಿ ಮೈಸೂರು ರಸ್ತೆಯ ಚಿತಾಗಾರ ನವೀಕರಣಗೊಳ್ಳುತ್ತಿದೆ. 10 ದಿನಗಳಲ್ಲಿ ಅದು ಸಿದ್ಧವಾಗಲಿದೆ’ ಎಂದು ಅವರು ಹೇಳಿದರು.

‘ಪ್ರತಿ ಚಿತಾಗಾರದಲ್ಲೂ ಎರಡು ಕಡೆ ಶವ ಸುಡುವ ವ್ಯವಸ್ಥೆ ಇರುತ್ತದೆ. ಅದರಲ್ಲಿ ಒಂದು ಕಾರ್ಯ ನಿರ್ವಹಿಸುವಾಗ ಇನ್ನೊಂದನ್ನು ಮೃತದೇಹ ಅಣಿಗೊಳಿಸಲು ಬಳಸಲಾಗುತ್ತದೆ. ಪ್ರತಿ ಚಿತಾಗಾರದಲ್ಲಿ ದಿನವೊಂದಕ್ಕೆ 16 ಶವಗಳ ಅಂತ್ಯಸಂಸ್ಕಾರ ನಡೆಸಬಹುದು’ ಎಂದು ಅವರು ವಿವರಿಸಿದರು.

‘ನಾಲ್ಕು ವಿದ್ಯುತ್ ಚಿತಾಗಾರಗಳನ್ನು ಕೋವಿಡ್‌ನಿಂದ ಮೃತಪಟ್ಟವರ ಅಂತಿಮ ಸಂಸ್ಕಾರಕ್ಕೆ ಮೀಸಲಿಡಲಾಗುವುದು. ಯಲಹಂಕ ಬಳಿಯ ಮೇಡಿ ಅಗ್ರಹಾರ, ಬೊಮ್ಮನಹಳ್ಳಿ, ಕೂಡ್ಲು, ಕೆಂಗೇರಿ ಹಾಗೂ ಮಹದೇವಪುರದ ವಿದ್ಯುತ್ ಚಿತಾಗಾರಗಳನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಲಾಗುವುದು’ ಎಂದರು.

**ಅವಧಿ ವಿಸ್ತರಣೆ:** ‘ಚಿತಾಗಾರಗಳಲ್ಲಿ ಅಂತ್ಯಕ್ರಿಯೆ ನಡೆಸುವ ಅವಧಿಯನ್ನು ವಿಸ್ತರಿಸಲಾಗಿದೆ. ಬೆಳಿಗ್ಗೆ 7ರಿಂದ ರಾತ್ರಿ 8ರ ವರೆಗೆ ಅಂತ್ಯಸಂಸ್ಕಾರ ನಡೆಸುವುದಕ್ಕೆ ಅವಕಾಶ ಕಲ್ಪಿಸಲಾಗುವುದು’ ಎಂದು ಅವರು ತಿಳಿಸಿದರು.

‘ಬಿಬಿಎಂಪಿಯ ಎಲ್ಲ ಪೌರ ಕಾರ್ಮಿಕರಿಗೂ ಕ್ಷಿಪ್ರ ಪರೀಕ್ಷೆ (ರ‍್ಯಾಪಿಡ್ ಆ್ಯಂಟಿಜನ್ ಟೆಸ್ಟ್) ನಡೆಸಲು ಸೂಚನೆ ನೀಡಿದ್ದೇನೆ’ ಎಂದರು.

### ದಂಡ 5 ಪಟ್ಟು ಹೆಚ್ಚಳ?

‘ಸಾರ್ವಜನಿಕ ಸ್ಥಳ ಹಾಗೂ ಕಚೇರಿಗಳಲ್ಲಿ ಅಂತರ ಕಾಯ್ದುಕೊಳ್ಳದವರಿಗೆ ಹಾಗೂ ಮಾಸ್ಕ್ ಧರಿಸದವರಿಗೆ ವಿಧಿಸುವ ದಂಡವನ್ನು ಐದು ಪಟ್ಟು ಹೆಚ್ಚಿಸಲು ಸರ್ಕಾರಕ್ಕೆ ಮನವಿ ಮಾಡಿದ್ದೇವೆ’ ಎಂದು ಆಯುಕ್ತರು ತಿಳಿಸಿದರು. ಪ್ರಸ್ತುತ ₹200 ದಂಡ ವಿಧಿಸಲಾಗುತ್ತಿದೆ.

### ‘ಅಧಿಕಾರ ಬಳಕೆ ಅನಿವಾರ್ಯ’

‘ಕೋವಿಡ್ ರೋಗಿಗಳ ಚಿಕಿತ್ಸೆಗೆ ಯಾವುದೇ ಆಸ್ಪತ್ರೆಯನ್ನು ವಶಕ್ಕೆ ಪಡೆಯಲು ಪ್ರಕೃತಿ ವಿಕೋಪ ನಿಯಂತ್ರಣ ಕಾಯ್ದೆಯಡಿ ನನಗೆ ಅಧಿಕಾರ ಇದೆ. ಖಾಸಗಿ ಆಸ್ಪತ್ರೆಗಳು ಈ ನಿಟ್ಟಿನಲ್ಲಿ ಸಹಕರಿಸದೇ ಇದ್ದರೆ ಈ ಅಧಿಕಾರ ಬಳಸಿಕೊಳ್ಳಬೇಕಾಗುತ್ತದೆ’ ಎಂದು ಮಂಜುನಾಥ ಪ್ರಸಾದ್ ಎಚ್ಚರಿಸಿದರು.

‘ನಗರದ ಎಲ್ಲ ಖಾಸಗಿ ಆಸ್ಪತ್ರೆಗಳಿಗೆ ನಾನು ಭೇಟಿ ನೀಡಿದ್ದೇನೆ. ಪ್ರತಿ ಆಸ್ಪತ್ರೆಯಲ್ಲೂ ಎಷ್ಟು ಹಾಸಿಗೆಗಳ ಸೌಲಭ್ಯ ಇದೆ ಎಂಬ ಮಾಹಿತಿ ನೀಡುವಂತೆ ಕೇಳಿದ್ದೇನೆ. ನಗರದಲ್ಲಿ 291 ಖಾಸಗಿ ಆಸ್ಪತ್ರೆಗಳಿದ್ದು, ಅವರೆಲ್ಲರಿಗೂ ಈ ಕುರಿತು ನೋಟಿಸ್ ನೀಡಲಾಗಿದೆ. ಈ ಮಾಹಿತಿ ನೀಡುವುದು ಅವರ ಕರ್ತವ್ಯ’ ಎಂದು ಸ್ಪಷ್ಟಪಡಿಸಿದರು.

### ನಟ ರಮೇಶ್ ರಾಯಭಾರಿ

ಕೋವಿಡ್ ನಿಯಂತ್ರಣದ ಬಗ್ಗೆ ಜನಜಾಗೃತಿ ಮೂಡಿಸಲು ಚಿತ್ರನಟ ರಮೇಶ್ ಅರವಿಂದ್ ಅವರನ್ನು ರಾಯಭಾರಿಯನ್ನಾಗಿ ಬಳಸಿಕೊಳ್ಳಲು ಬಿಬಿಎಂಪಿ ನಿರ್ಧರಿಸಿದೆ.

‘ರಾಯಭಾರಿಯಾಗಿ ಕಾರ್ಯನಿರ್ವಹಿಸಲು ರಮೇಶ್ ಒಪ್ಪಿದ್ದಾರೆ. ಅವರು ಇದಕ್ಕಾಗಿ ಪಾಲಿಕೆಯಿಂದ ಯಾವುದೇ ಶುಲ್ಕವನ್ನು ಪಡೆಯುತ್ತಿಲ್ಲ. ಈಗಾಗಲೇ ಅವರ ಮೂಲಕ ವಿಡಿಯೋ ತುಣುಕುಗಳನ್ನು ಸಿದ್ಧಪಡಿಸಲಾಗುತ್ತಿದೆ. ಅವುಗಳನ್ನು ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಮಾಡಲಿದ್ದೇವೆ’ ಎಂದು ಮಂಜುನಾಥ ಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

## ಚೀನಾ ಮೂಲದ ಕಂಪನಿಗಳಿಂದ ಸೈಬರ್ ದಾಳಿ ಎಚ್ಚರಿಕೆ

ನವದೆಹಲಿ: ಚೀನಾ ಮೂಲದ ಕಂಪನಿಗಳಿಂದ ಸೈಬರ್ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ದೂರಸಂಪರ್ಕ ಇಲಾಖೆ ಎಚ್ಚರಿಸಿದೆ. ಹೀಗಾಗಿ ತಮ್ಮ ವೆಬ್‌ಸೈಟ್ ಹಾಗೂ ವೆಬ್‌ಪೋರ್ಟಲ್‌ಗಳ ಸುರಕ್ಷತೆಯನ್ನು ಹೆಚ್ಚಿಸುವಂತೆ ತನ್ನ ಅಧೀನದ ಎಲ್ಲ ಇಲಾಖೆಗಳಿಗೆ ಸೂಚನೆ ನೀಡಿದೆ.

ತಾನು ನೀಡಿದ ಸೂಚನೆಯನ್ವಯ ಕೈಗೊಂಡ ಸುರಕ್ಷತಾ ಕ್ರಮಗಳ ಕುರಿತು ವರದಿ ಸಲ್ಲಿಸುವಂತೆಯೂ ಇಲಾಖೆ ಸೂಚನೆ ನೀಡಿದೆ.

ಆಗಸ್ಟ್ 31ರ ಒಳಗಾಗಿ ಎಲ್ಲ ವೆಬ್‌ಸೈಟ್ ಹಾಗೂ ಪೋರ್ಟಲ್‌ಗಳನ್ನು ‘ಜಿಒವಿ.ಐಎನ್’ ಡೊಮೇನ್‌ಗೆ ಬದಲಾಯಿಸುವಂತೆ ಇತರ ಸಚಿವಾಲಯಗಳು ಹಾಗೂ ಇಲಾಖೆಗಳಿಗೆ ಸೂಚನೆ ನೀಡಿದೆ.

## ಹೃಷಿಕೇಶ್ ಐಐಎಂಬಿ ನಿರ್ದೇಶಕ

ಬೆಂಗಳೂರು: ಬೆಂಗಳೂರಿನ ಭಾರತೀಯ ನಿರ್ವಹಣಾ ಸಂಸ್ಥೆಯ (ಐಐಎಂಬಿ) ನಿರ್ದೇಶಕರಾಗಿ ಪ್ರೊ. ಹೃಷಿಕೇಶ್ ಟಿ. ಕೃಷ್ಣನ್ ಸೋಮವಾರ ಅಧಿಕಾರ ಸ್ವೀಕರಿಸಿದರು.

ಇಂದೋರ್‌ನ ಐಐಎಂನ ನಿರ್ದೇಶಕರಾಗಿ ಅವರು ಕಾರ್ಯನಿರ್ವಹಿಸಿದ್ದರು. ‘ಸವಾಲಿನ ಈ ಸಂದರ್ಭದಲ್ಲಿ ಮ್ಯಾನೇಜ್‌ಮೆಂಟ್ ಶಿಕ್ಷಣವನ್ನು ಪುನರ್ ವ್ಯಾಖ್ಯಾನಿಸುವ ಅವಕಾಶವನ್ನು ಎದುರು ನೋಡುತ್ತಿದ್ದೇನೆ’ ಎಂದಿದ್ದಾರೆ.



### ಆಟೊ, ಟ್ಯಾಕ್ಸಿ ಚಾಲಕರಿಗೆ ನೆರವು

# ಅರ್ಧದಷ್ಟು ಮಂದಿಗೂ ಸಿಕ್ಕಿಲ್ಲ ಪರಿಹಾರ

• ಓದೇಶ ಸಕಲೇಶಪುರ

ಹುಬ್ಬಳ್ಳಿ: ಲಾಕ್‌ಡೌನ್‌ನಿಂದ ಸಂಕಷ್ಟಕ್ಕೊಳಗಾದ ಆಟೊ ಮತ್ತು ಟ್ಯಾಕ್ಸಿ ಚಾಲಕರಿಗೆ ರಾಜ್ಯ ಸರ್ಕಾರ ಘೋಷಣೆ ಮಾಡಿದ್ದ ₹5 ಸಾವಿರ ನೆರವು ಎರಡು ತಿಂಗಳಾದರೂ ಅರ್ಧದಷ್ಟು ಮಂದಿಗೂ ಸಿಕ್ಕಿಲ್ಲ. ನೆರವು ಕೋರಿ ಬಂದಿರುವ 2.46 ಲಕ್ಷ ಅರ್ಜಿಗಳ ಪೈಕಿ ಇದುವರೆಗೆ 1.20 ಲಕ್ಷ ಮಂದಿಗಷ್ಟೇ ಹಣ ಪಾವತಿಯಾಗಿದೆ.

ಮುಖ್ಯಮಂತ್ರಿ ಅವರು, ಮೇ ತಿಂಗಳ ಮೊದಲ ವಾರದಲ್ಲಿ ಚಾಲಕರಿಗೆ ಪರಿಹಾರ ಪ್ಯಾಕೇಜ್ ಘೋಷಿಸಿದ್ದರು. ರಾಜ್ಯದಾದ್ಯಂತ ಸುಮಾರು 7.75 ಲಕ್ಷ ಆಟೊ ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಇದರಿಂದ ಅನುಕೂಲವಾಗಲಿದೆ ಎಂದು ಅಂದಾಜಿಸಲಾಗಿತ್ತು.

**16 ಸಾವಿರ ಬಾಕಿ:** ‘ಚಾಲಕರ ಬ್ಯಾಂಕ್ ಖಾತೆಗೆ ತಲಾ ₹5 ಸಾವಿರದಂತೆ ಇದುವರೆಗೆ ₹60 ಕೋಟಿ ಪಾವತಿಸಲಾಗಿದೆ. ಒಟ್ಟು ಅರ್ಜಿಗಳ ಪೈಕಿ, ವಿವಿಧ ಕಾರಣಗಳಿಗಾಗಿ 16 ಸಾವಿರ ಬಾಕಿ ಇವೆ. ಉಳಿದ 1.10 ಲಕ್ಷ ಅರ್ಜಿಗಳು ಪಾವತಿಯಾಗುವ ಪ್ರಕ್ರಿಯೆಯಲ್ಲಿವೆ’ ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಎಲ್. ಹೇಮಂತ ಕುಮಾರ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಆಟೊವನ್ನು ಬಾಡಿಗೆಗೆ ಪಡೆದು ಚಾಲನೆ ಮಾಡುವವರು ಅನೇಕರಿದ್ದಾರೆ. ಪರವಾನಗಿ ಮತ್ತು ಬ್ಯಾಡ್ಜ್ ಹೊಂದದವರ ಸಂಖ್ಯೆಯೂ ಹೆಚ್ಚಾಗಿದೆ. ಇವರು ಪರಿಹಾರದ ವ್ಯಾಪ್ತಿಗೆ ಬರುವುದಿಲ್ಲ. ಅರ್ಜಿ ಸಲ್ಲಿಕೆಗೆ ಜುಲೈ 31ರವರೆಗೆ ಅವಕಾಶವಿದೆ’ ಎಂದರು.

**ಕಠಿಣ ಷರತ್ತುಗಳು:** ‘ಬಹುತೇಕ ಆಟೊ ಮತ್ತು ಟ್ಯಾಕ್ಸಿ ಚಾಲಕರ ಬಳಿ ನಿಯಮಾನುಸಾರ ಇರಬೇಕಾದ ದಾಖಲೆಗಳಿಲ್ಲ. ಹಾಗಾಗಿ ಸರ್ಕಾರ ವಿಧಿಸಿರುವ ಷರತ್ತುಗಳನ್ನು ಅವರು ಪೂರೈಸಲು ಸಾಧ್ಯವಾಗಿಲ್ಲ. ಪರಿಹಾರ ಪಡೆಯಲು ಚಾಲಕರು 2020ರ ಮಾರ್ಚ್ 24ರೊಳಗೆ ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರಬೇಕು. ವಾಹನದ ಸುಸ್ಥಿತಿ (ಫಿಟ್‌ನೆಸ್) ಪ್ರಮಾಣ ಪತ್ರ ಇರಬೇಕು. ಹಳದಿ ಬೋರ್ಡ್‌ನ ಸ್ವಂತ ಆಟೊ ಅಥವಾ ಟ್ಯಾಕ್ಸಿ ಹೊಂದಿರಬೇಕು’ ಎಂದು ಹುಬ್ಬಳ್ಳಿ ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿ ಅಪ್ಪಯ್ಯ ನಾಲತವಾಡಮಠ ತಿಳಿಸಿದರು.



**ಆಟೊ ಚಾಲನೆ ಮಾಡುವ ಎಲ್ಲರಿಗೂ ಪರಿಹಾರ ಸಿಗಬೇಕು. ಆಗ ಮಾತ್ರ ಸರ್ಕಾರ ಘೋಷಿಸಿರುವ ಈ ಪರಿಹಾರ ಪ್ಯಾಕೇಜ್ ನಿಜವಾದ ಫಲಾನುಭವಿಗಳನ್ನು ತಲುಪುತ್ತದೆ**

**ಶೇಖರಯ್ಯ ಮಠಪತಿ,** ಅಧ್ಯಕ್ಷ, ಉತ್ತರ ಕರ್ನಾಟಕ ಆಟೊ ಚಾಲಕರ ಒಕ್ಕೂಟ



**ಕಠಿಣ ಷರತ್ತುಗಳಿಂದ ಬಹುತೇಕ ಆಟೊ ಮತ್ತು ಟ್ಯಾಕ್ಸಿ ಚಾಲಕರು ಪರಿಹಾರದಿಂದ ವಂಚಿತರಾಗಿದ್ದಾರೆ. ಬಾಡಿಗೆ ಆಧಾರದ ಮೇಲೆ ವಾಹನ ಓಡಿಸುತ್ತಿದ್ದರೂ ಪರಿಹಾರ ನೀಡಬೇಕು**

**ಕೆ. ಸೋಮಶೇಖರ್,** ಅಧ್ಯಕ್ಷ, ನಮ್ಮ ಚಾಲಕರ ಟ್ರೇಡ್ ಯೂನಿಯನ್

ಪ್ರಜಾವಾಣಿ ವಿಶೇಷ


ನೈಋತ್ಯ ರೈಲ್ವೆಯಿಂದ

BDU

ವಾಣಿಜ್ಯ ಅಭಿವೃದ್ಧಿ ಘಟಕಗಳ ಪ್ರಾರಂಭ

(ಕಾರ್ಯಾಚರಣೆ, ವಾಣಿಜ್ಯ, ಆರ್ಥಿಕ ಮತ್ತು ಮೆಕ್ಯಾನಿಕಲ್ ವಿಭಾಗಗಳ ವಿವಿಧ ಅಧಿಕಾರಿಗಳಿಂದ ಕೂಡಿದ ಘಟಕ)

- ವ್ಯವಹಾರ ನಿರ್ವಹಣೆಯನ್ನು ಸುಲಭಗೊಳಿಸುವುದು
- ವಿವಿಧ ಕ್ಷೇತ್ರಗಳಿಂದ ಸರಕು ಸಾಗಣೆಯ ವ್ಯವಹಾರಗಳನ್ನು ಗಳಿಸಲು ಕ್ರಮ
- ರೈಲ್ವೆಯಿಂದ ನಡೆಯುತ್ತಿರುವ ಸರಕುಗಳು ಮತ್ತು ಪಾರ್ಸೆಲ್‌ಗಳ ಸಾಗಾಟದ ಪ್ರಮಾಣವನ್ನು ಹೆಚ್ಚಿಸುವುದು

ಮಾನ್ಯ ವರ್ತಕರೇ ಮತ್ತು ವ್ಯಾಪಾರಸ್ಥರೇ:

ಕೋವಿಡ್–19ರಿಂದ ನಿಮ್ಮ ವ್ಯಾಪಾರ ವಹಿವಾಟುಗಳಿಗೆ ಯಾವುದೇ ರೀತಿಯ ಧಕ್ಕೆ ಉಂಟಾಗದಂತೆ ನಿಮಗೆ ಉತ್ತಮವಾಗಿ ಮತ್ತು ತ್ವರಿತಗತಿಯಲ್ಲಿ ಸೇವೆ ಸಲ್ಲಿಸಲು ನಾವು ಇದ್ದೇವೆ.



ರೈಲಿನಲ್ಲಿ ಸರಕು ಸಾಗಿಸುವುದರಿಂದ ಉಂಟಾಗುವ ಪ್ರಯೋಜನಗಳು:

- ಶೀಘ್ರವಾಗಿ ಸರಕು ಸಾಗಾಟ ಮತ್ತು ವಿತರಣೆ
- ಕಡಿಮೆ ವೆಚ್ಚ ಮತ್ತು ಭರವಸೆ
- ವಿಶ್ವಾಸಾರ್ಹ ಮತ್ತು ದಕ್ಷ
- ಸುರಕ್ಷಿತ ಮತ್ತು ಸುಭದ್ರ
- ಸಮಯಕ್ಕೆ ಸರಿಯಾಗಿ ತಲುಪಿಸುವ ಭರವಸೆ

ವಿವರಗಳಿಗಾಗಿ ಸಂಪರ್ಕಿಸಿ:

ವಲಯ ಹಂತದ ಸಮನ್ವಯಾಧಿಕಾರಿಗಳು ಮತ್ತು ಸಂಚಾಲಕರು

| | ಹೆಸರು | ಮೊಬೈಲ್ ನಂ. |
|---|---|---|
| ಕೇಂದ್ರ ಕಛೇರಿ | ಸತ್ಯಪ್ರಕಾಶ್ ಶಾಸ್ತ್ರಿ | 9731665901 |
| | ಹೆಚ್. ಎಂ. ದಿನೇಶ್ | 9731665902 |

ವಿಭಾಗೀಯ ಹಂತದ ಅಧಿಕಾರಿಗಳು

| ವಿಭಾಗ | ಹೆಸರು | ಮೊಬೈಲ್ ನಂ. |
|---|---|---|
| ಬೆಂಗಳೂರು | ಅಖಿಲ್ ಎಂ. ಶಾಸ್ತ್ರಿ | 9731666900 |
| ಬೆಂಗಳೂರು | ಡಾ. ಎ. ಎನ್. ಕೃಷ್ಣಾರೆಡ್ಡಿ | 9731666950 |
| ಮೈಸೂರು | ಡಾ. ಎಸ್. ಜಿ. ಯತೀಶ್ | 9731667950 |
| ಮೈಸೂರು | ಡಾ. ಆರ್. ಸತೀಶ್ ರಟ್ಕಲೆ | 9731667900 |
| ಹುಬ್ಬಳ್ಳಿ | ಇಮ್ತಿಯಾಜ್ ಅಹಮದ್ | 9731668950 |
| ಹುಬ್ಬಳ್ಳಿ | ಕೃಷ್ಣ ಚೈತನ್ಯ | 9731668900 |

ನೈಋತ್ಯ ರೈಲ್ವೆ

ಭಾರತೀಯ ರೈಲ್ವೆ–ರಾಷ್ಟ್ರದ ಜೀವನಾಡಿ

www.swr.indianrailways.gov.in | facebook.com/S.W.Railways | twitter.com/SWRRLY



TeamLease® Putting India to Work

**ಟೀಂಲೀಸ್ ಸರ್ವೀಸಸ್ ಲಿಮಿಟೆಡ್**

6ನೇ ಮಹಡಿ, ಬಿಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ – 560095, ಭಾರತ

ದೂರವಾಣಿ: +91 80 68243000, ಫ್ಯಾಕ್ಸ್: +91 80 68243001

corporateaffairs@teamlease.com | www.teamleasegroup.com

**ನಿರ್ದೇಶಕರುಗಳ ಸಭೆಯ ನೋಟೀಸು**

ಈ ಮೂಲಕ ನೋಟೀಸು ನೀಡಲಾಗುತ್ತಿರುವುದೇನೆಂದರೆ, ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೆಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್ (ಎಲ್‌ಒಡಿಆರ್), 2015, ನಿಬಂಧನೆಗಳ 47(1)(ಎ)ರ ನಿಬಂಧನೆಯ ಅನುಸಾರ, ಕಂಪನಿಯ ನಿರ್ದೇಶಕರುಗಳ ಸಭೆಯನ್ನು ಶುಕ್ರವಾರ, ಜುಲೈ 31, 2020 ರಂದು ಭಾರತೀಯ ಕಾಲಮಾನ ಮಧ್ಯಾಹ್ನ 12 ಗಂಟೆಗೆ 30ನೇ ಜೂನ್, 2020 ರಂದು ತ್ರೈಮಾಸಿಕಕ್ಕೆ ಕೊನೆಗೊಂಡ ಒಗ್ಗೂಡಿತ ಅಪರಿಶೋಧಿತ, ಪ್ರತ್ಯೇಕಿತ ಆರ್ಥಿಕ ಫಲಿತಾಂಶಗಳನ್ನು ಮತ್ತು ಇತರ ಅಂಶಗಳ ಜೊತೆಯಲ್ಲಿ ಪರಿಗಣಿಸುವ ಸಲುವಾಗಿ ನಡೆಸಲಾಗುತ್ತದೆ.

ನಿರ್ದೇಶಕರುಗಳ ಸಭೆಯ ನೋಟೀಸಿನ ಮಾಹಿತಿಯು ಕಂಪನಿಯ ವೆಬ್‌ಸೈಟ್ www.teamleasegroup.com ನಲ್ಲಿ ಹಾಗೂ ಬಿಎಸ್‌ಇ ಲಿಮಿಟೆಡ್ ವೆಬ್‌ಸೈಟ್ www.bseindia.com ಮತ್ತು ನ್ಯಾಶನಲ್ ಸ್ಟಾಕ್ ಎಕ್ಸ್‌ಚೆಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಇಲ್ಲಿ ಕೂಡ ಲಭ್ಯವಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/–
ಅಲಕ ಚಂದ
ಕಂಪನಿ ಸೆಕ್ರಟರಿ ಮತ್ತು ಕಂಪ್ಲೈಯನ್ಸ್ ಆಫೀಸರ್

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 21, 2020



**3M ಇಂಡಿಯಾ ಲಿಮಿಟೆಡ್**

CIN: L31300KA1987PLC013543

ನೋಂದಾಯಿತ ಕಚೇರಿ: ಪ್ಲಾಟ್ ನಂ. 48–51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100 ದೂರವಾಣಿ: 080–22231414, ಫ್ಯಾಕ್ಸ್: 080–2223 1450

ಇಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com/in

**33ನೇ ವಾರ್ಷಿಕ ಸರ್ವಸದಸ್ಯರ ಸಭೆಯ (ಎಜಿಎಂ) ಸೂಚನೆ, ರಿಮೋಟ್ ಇ–ಮತದಾನದ ಮತ್ತು ಪುಸ್ತಕಗಳ ಮುಚ್ಚುವಿಕೆಯ ಬಗ್ಗೆ ಮಾಹಿತಿ**

ಕಂಪನಿಯ ಎಜಿಎಂ ಸೂಚನೆಯಲ್ಲಿ ತಿಳಿಸಿರುವಂತಹ ವ್ಯವಹಾರವನ್ನು ನಡೆಸುವ ಸಲುವಾಗಿ ಕಂಪನಿಯ 33ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಬುಧವಾರ, 2020ರ ಆಗಸ್ಟ್ 26ರಂದು ಮಧ್ಯಾಹ್ನ 03.00 ಗಂಟೆಗೆ (ಭಾ.ಕಾ.) ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದಂತೆ ವಿಡಿಯೊ ಕಾನ್ಫರೆನ್ಸ್ (VC) / ಇತರ ಶ್ರವಣ ದೃಶ್ಯ ಮಾಧ್ಯಮಗಳ (OAVM) ಮೂಲಕ ಒಂದು ಸಾಮಾನ್ಯ ಸ್ಥಳದಲ್ಲಿ ಅನ್ವಯವಾಗುವ ಕಾರ್ಪೊರೇಟ್ ಸಚಿವಾಲಯ (ಎಂಸಿಎ), ಭಾರತ ಸರ್ಕಾರ ಮತ್ತು ಸೆಕ್ಯೂರಿಟೀಸ್ ಎಕ್ಸ್‌ಚೆಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಹೊರಡಿಸಿರುವ ‘ಸಾಮಾನ್ಯ ಸುತ್ತೋಲೆ’ ಸಂ. 20/2020, 14/2020, ಮತ್ತು 17/2020, ಮತ್ತು ಅನ್ವಯವಾಗುವ ಇತರ ಎಲ್ಲ ಕಾನೂನುಗಳ ಮತ್ತು ಸುತ್ತೋಲೆಗಳ ಪ್ರಕಾರ ನಡೆಸಲಾಗುವುದು ಎಂದು ಈ ಸೂಚನೆಯನ್ನು ನೀಡಲಾಗಿದೆ.

ಮೇಲಿನ ಸುತ್ತೋಲೆಗಳ ಅನುಸಾರ, ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ/ಡಿಪಾಸಿಟರಿಗಳೊಂದಿಗೆ ನೋಂದಾಯಿಸಿ ಕೊಂಡಿರುವ ಸದಸ್ಯರಿಗೆ ಎಜಿಎಂ ಸೂಚನೆ ಹಾಗೂ 2019–20 ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಮಾತ್ರ ವಿದ್ಯುನ್ಮಾನ ಮಾರ್ಗಗಳಲ್ಲಿ ಕಳುಹಿಸಲಾಗಿದೆ. 2019–20 ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳ ರವಾನೆ ಕೆಲಸ ಮಂಗಳವಾರ, 2020ರ ಜುಲೈ 21ನೇ ದಿನದಂದು ಮುಗಿದಿದೆ. ಎಜಿಎಂ ಸೂಚನೆ ಮತ್ತು 2019–20 ಸಾಲಿನ ವಾರ್ಷಿಕ ವರದಿಗಳು ಕಂಪನಿಯ https://www.3mindia.in/3M/en_IN/company-in/about-3m/financial-facts-local, ಸ್ಟಾಕ್ ಎಕ್ಸ್‌ಚೇಂಜ್ ಗಳಾದ ಬಿಎಸ್‌ಇ ಲಿಮಿಟೆಡ್‌ನ www.bseindia.com, ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನ www.nseindia.com ಮತ್ತು ಇ–ಮತದಾನದ ಮಧ್ಯವರ್ತಿಗಳಾದ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ (Kfin) https://evoting.karvy.com ಗಳಲ್ಲಿಯೂ ಲಭ್ಯವಿವೆ.

ಕಂಪನಿಗಳ ಅಧಿನಿಯಮ, 2013ರ ಕಲಮು 108ರ ನಿಬಂಧನೆಗಳು ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಾವಳಿ, 2014ರ ತಿದ್ದುಪಡಿಯಾದ ನಿಯಮ 20 ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ವಿಧಾಯಕಗಳು, 2015ರ ವಿಧಾಯಕ 44 ಪ್ರಕಾರ ಅಂತಿಮ ದಿನವಾದ ಗುರುವಾರ, 2020ರ ಆಗಸ್ಟ್ 20ರಂದು ಭೌತಿಕ ಅಥವಾ ಡೀಮ್ಯಾಟ್ ರೂಪದಲ್ಲಿ ಶೇರುಗಳನ್ನು ಹೊಂದಿರುವಂತಹ ಸದಸ್ಯರು https://evoting.karvy.com/ ಗೆ ಲಾಗ್‌ಇನ್ ಆಗಿ ಕೆಫಿನ್ ಒದಗಿಸಿರುವ ಇ–ಮತದಾನ ವೇದಿಕೆಯ ಮೂಲಕ ವಿದ್ಯುನ್ಮಾನ ರೂಪದಲ್ಲಿ ಎಜಿಎಂ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸಬಹುದಾಗಿದೆ. ಇ–ಮತದಾನದ ಕುರಿತಾದ ಪ್ರಕ್ರಿಯೆ/ಸೂಚನೆ ಗಳ ವಿವರಗಳು ಎಜಿಎಂ ಸೂಚನೆಯಲ್ಲೂ ಇವೆ.

**ಈ ಸಂಬಂಧವಾಗಿ ಈ ಕೆಳಗಿನ ಅಂಶಗಳನ್ನೂ ಸದಸ್ಯರ ಗಮನಕ್ಕೆ ತರುತ್ತಿದ್ದೇವೆ:**

1. ಕಂಪನಿಯು, ಎಜಿಎಮ್‌ಗೆ ಅಗತ್ಯವಾಗುವ ವಿಡಿಯೊ ಕಾನ್ಫರೆನ್ಸ್ ಸೌಲಭ್ಯವನ್ನು ಮತ್ತು ಎಜಿಎಮ್ ನಡೆಸಲು ಅಧಿಕೃತ ಸಹಾಯಕರನ್ನು ಒದಗಿಸಲು ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಮಧ್ಯವರ್ತಿಗಳಾದ ಕೆಫಿನ್ ಸಂಸ್ಥೆಯನ್ನು ನೇಮಿಸಿಕೊಂಡಿದೆ. ಸದಸ್ಯರು, https://emeetings.kfintech.com ಗೆ ಹೋಗಿ ತಮ್ಮ ರಿಮೋಟ್ ಇ–ಮತದಾನದ ಅಧಿಕಾರಗಳನ್ನು ಬಳಸಿಕೊಂಡು ‘ಶೇರುದಾರರು/ಸದಸ್ಯರು’ ಅಡಿಯಲ್ಲಿ ಲಾಗ್‌ಇನ್ ಆಗಿ ‘ವಿಡಿಯೊ ಕಾನ್ಫರೆನ್ಸ್’ ಮೇಲೆ ಕ್ಲಿಕ್ಕಿಸಿ ವಿಡಿಯೊ ಕಾನ್ಫರೆನ್ಸ್ ವೇದಿಕೆಯನ್ನು ಪ್ರವೇಶಿಸಬಹುದು.
2. ರಿಮೋಟ್ ಇ–ಮತದಾನವು ಭಾನುವಾರ, 2020 ಆಗಸ್ಟ್ 23ರಂದು ಭಾ.ಕಾ. ಬೆಳಿಗ್ಗೆ 09.00ಕ್ಕೆ ಆರಂಭವಾಗಿ ಮಂಗಳವಾರ, 2020 ಆಗಸ್ಟ್ 25, ಭಾ.ಕಾ. ಸಂಜೆ 05.00ಕ್ಕೆ ಮುಗಿಯುತ್ತದೆ. 2020 ಆಗಸ್ಟ್ 25, ಭಾ.ಕಾ. ಸಂಜೆ 05.00ಕ್ಕೆ ಕೆಫಿನ್ ಇ–ಮತದಾನ ಸೌಲಭ್ಯವನ್ನು ತೆಗೆದುಬಿಡುತ್ತದೆ.
3. ಪುಸ್ತಕಗಳನ್ನು ಮುಚ್ಚುವ ದಿನಾಂಕ / ಇ–ಮತದಾನದ ಅರ್ಹತೆ ಪಡೆಯಲು ಕೊನೆಯ ದಿನಾಂಕ: ಗುರುವಾರ, 2020 ಆಗಸ್ಟ್ 20.
4. ಕಂಪನಿಯ ಸದಸ್ಯರ ಪುಸ್ತಕ ಮತ್ತು ಶೇರು ವರ್ಗಾವಣೆ ಪುಸ್ತಕ ಗಳು ಶುಕ್ರವಾರ, 2020 ಆಗಸ್ಟ್ 21ರಿಂದ ಬುಧವಾರ, 2020 ಆಗಸ್ಟ್ 26 (ಎರಡು ದಿನಗಳೂ ಸೇರಿರುತ್ತವೆ) ರವರೆಗೆ ಮುಚ್ಚಿರುತ್ತವೆ.
5. ಸದರಿ ಸೂಚನೆಯು ರವಾನೆಯಾದ ದಿನಾಂಕದ ನಂತರ ಶೇರುಗಳನ್ನು ಪಡೆದುಕೊಂಡು ಕಂಪನಿಯ ಸದಸ್ಯರಾಗಿರುವ, ಮತ್ತು ಅಂತಿಮ ದಿನಾಂಕವಾದ ಗುರುವಾರ, 2020 ಆಗಸ್ಟ್ 20ರಂದು ಅರ್ಹ ಶೇರುದಾರರಾಗಿರುವ ವ್ಯಕ್ತಿಗಳು ಶ್ರೀ ರಾಜೀವ ಕುಮಾರ್, ಇಮೇಲ್: rajeev.kr@kfintech.com, ಇವರನ್ನು ಸಂಪರ್ಕಿಸಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಪಡೆದುಕೊಳ್ಳಬಹುದು.
6. ವಿಡಿಯೊ ಕಾನ್ಫರೆನ್ಸ್ ಸೌಲಭ್ಯದ ಮೂಲಕ ಎಜಿಎಮ್‌ನಲ್ಲಿ ಉಪಸ್ಥಿತರಿರುವ ಮತ್ತು ರಿಮೋಟ್ ಇ–ಮತದಾನದ ಮೂಲಕ ತಮ್ಮ ಮತವನ್ನು ಚಲಾಯಿಸಿಲ್ಲದ ಸದಸ್ಯರು/ಶೇರುದಾರರು ಮಾತ್ರವೇ ಎಜಿಎಮ್‌ನಲ್ಲಿ ಇ–ಮತದಾನದ ಮೂಲಕ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುತ್ತಾರೆ.
7. ಏನಾದರೂ ಸಂದೇಹಗಳಿದ್ದರೆ https://evoting.karvy.com ನ ಡೌನ್‌ಲೋಡ್ ವಿಭಾಗದಲ್ಲಿರುವ ‘ಶೇರುದಾರರ ಸಾಮಾನ್ಯ ಪ್ರಶ್ನೆಗಳು’ (FAQs) ಮತ್ತು ಶೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿಗಳನ್ನು ನೋಡಬಹುದು ಅಥವಾ ಕೆಫಿನ್‌ನ ಶ್ರೀ ರಾಜೀವ ಕುಮಾರ್‌ರನ್ನು ಸಂಪರ್ಕಿಸಬಹುದು, 040–67161524 / ನಿಶುಲ್ಕ ಸಂಖ್ಯೆ 1800 345 4001.
8. ಕಂಪನಿಯು ವಿದ್ಯುನ್ಮಾನ ಮತದಾನ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು, ಬೋರ್ಡ್‌ನ ದೃಷ್ಟಿಯಲ್ಲಿ ಸೂಕ್ತ ಅರ್ಹತೆಯುಳ್ಳ ವ್ಯಕ್ತಿ ಎಂದು ಪರಿಗಣಿಸಲಾದ ವೃತ್ತಿಪರ ಕಂಪನಿ ಕಾರ್ಯದರ್ಶಿಗಳಾದ ಶ್ರೀ ವಿಜಯಕೃಷ್ಣ ಕೆ.ಟಿ., ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿದೆ.

3M ಇಂಡಿಯಾ ಲಿಮಿಟೆಡ್ ಪರವಾಗಿ
ವಿ ಶ್ರೀನಿವಾಸನ್
ಕಂಪನಿ ಸೆಕ್ರೆಟರಿ

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 21, 2020